ಕೈಗಳಿಂದ ಮುಖ ಮುಚ್ಚಿಕೊಂಡು ತಾಯಿ ಬಿಕ್ಕಳಿಸಿದರು. ಆ ಶಬ್ದ ಕೇಳಿ ಅಪ್ಪಾವ್ರು ತಲೆ ಎತ್ತಿ ನೋಡಿದರು. ಆಕೆಯ ಕಣ್ಣೀರು ಕಂಡು, 'ಯಾಕೆ ಅಳುತ್ತೀಯೇ? ನಿನ್ನ ಕಣ್ಣೀರನ್ನು ಕಂಡೋ, ನಿನ್ನ ಮಗನ ವಾದವನ್ನು ಕೇಳಿಯೋ ನಾನು ಕರಗಿ ಬಿಡುವುದಿಲ್ಲ. ನೀವು ಹೇಳಿದಂತೆ ಬಾಲವನ್ನಾಡಿಸಿಕೊಂಡು ನಿಮ್ಮ ಹಿಂದೆ ಬರುತ್ತೇನೆಂದುಕೊಂಡಿರಾ? ಇದು ನನ್ನ ಮನೆ. ನಾನು ಕಷ್ಟಪಟ್ಟು ಕಟ್ಟಿಸಿದ ಮನೆ. ಇಲ್ಲಿರುವವರು ನಾನು ಹೇಳಿದಂತೆ ಕೇಳಿಕೊಂಡು ಬಿದ್ದಿರಬೇಕು. ನನ್ನ ಮುಂದೆ ನಿಂತು ಭಾಷಣ ಬಿಗಿಯಲು ನೋಡಬೇಡಿ.'

ಅಮ್ಮ ಏನೂ ಮಾತನಾಡದೆ ಕಣ್ಣೀರಿನೊಂದಿಗೆ ನೆಲವನ್ನು ನೋಡುತ್ತಾ ನಿಂತರು. ರವಿ ಮಾತಾಡಲಿಲ್ಲ. ಅವನ ಮನಸ್ಸಿನ ನೆಮ್ಮದಿಯೆಲ್ಲ ಹಾಳಾಗಿ ಹೋಗಿತ್ತು. ತನ್ನ ಮುಖವನ್ನು ಒರೆಸಿಕೊಳ್ಳುತ್ತಾ ನಿಂತಿದ್ದ ಮಗನನ್ನು ನೋಡಿ ಅಪ್ಪ ಹೇಳಿದರು, 'ಯಾಕೆ ಮಾತೇ ಆಡದೆ ನಿಂತಿದ್ದೀ? ಈ ಮುದುಕನ್ನು ಹೇಗೆ ಓಡಿಸಬೇಕೆಂದು ಯೋಚಿಸುತ್ತಿದ್ದೀಯೇನು? ಹಾಗಾದರೆ ಅಂತಹ ಆಸೆಯನ್ನು ಬಿಟ್ಟು ಬಿಡಿ. ನಾನೀ ಮನೆಯಲ್ಲಿ ಸಾಯುವವರೆಗೂ ಮಲಗಿರುತ್ತೇನೆ. ಅರ್ಥವಾಯಿತೇ?'

'ಅರ್ಥವಾಯಿತಪ್ಪಾ, ಅರ್ಥವಾಯಿತು' ಅಸಹ್ಯದಿಂದ ರವಿ ಹೇಳಿದ. 'ನೀವು ಅಮ್ಮನ ಕಣ್ಣೀರು ಕುಡಿಯುತ್ತಲೇ ಇರುತ್ತೀರೇನು? ನಾವು ಒಂದು ದಿನವಾದರೂ ಸಮಾಧಾನದಿಂದಿರುವುದು ನಿಮಗೆ ಇಷ್ಟವಿಲ್ಲ ಅಲ್ಲವೇ? ನೀವು ಏನು ಬಯಸುತ್ತಿದ್ದೀರಿ? ಹೆಂಡತಿ ಮಕ್ಕಳನ್ನು ಹೊಡೆದೋಡಿಸಿ ನೀವು ಒಬ್ಬರೇ ಈ ಮನೆಯಲ್ಲಿರಬೇಕೆಂದೇ? ಹಾಗಿದ್ದರೆ ಹೇಳಿ.'

ರವಿ ತನ್ನ ಕೈಗಳನ್ನು ಹೊಸೆಯುತ್ತಾ ತಕ್ಷಣವೇ ಆ ಕೊಠಡಿಯನ್ನು ಬಿಟ್ಟು ಹೊರಟು ಹೋದನು. ಹಜಾರದ ಮೆಟ್ಟಿಲಿಳಿದು ತಂದೆಯವರು ಸೊಟ್ಟ ಸೊಟ್ಟಗೆ ರಸ್ತೆಯಲ್ಲಿ ನಡೆಯುವಂತೆಯೇ ನಡೆಯುತ್ತಾ ನಡೆದು ಹೋದನು. ಅಪ್ಪಾವ್ರು ಅರ್ಧ ಸೇದಿ ಮುಗಿಸಿದ ಚುಟ್ಟವನ್ನು ಕಿಟಕಿಯ ಮೇಲಿಟ್ಟರು. ತಮ್ಮ ಮುಖದ ಮೇಲಿನ ಪುಟ್ಟ ಪುಟ್ಟ ಕೂದಲುಗಳನ್ನು ತಡವುತ್ತಾ ಅಂಗಳದಲ್ಲಿ ಹೋಗಿ ನಿಂತರು.

ಸ್ವಲ್ಪ ಹೊತ್ತು ಕಂಬವನ್ನು ಒರಗಿ ನಿಂತ ಅವರು ಏನನ್ನೋ ಆಲೋಚಿಸತೊಡಗಿದರು. ಹಾಗೇ ಮೆಲ್ಲಗೆ ಆರಾಮ ಕುರ್ಚಿಯನ್ನು ಸರಿ ಮಾಡಿಕೊಂಡರು. ಇನ್ನೊಂದು ಚುಟ್ಟವನ್ನು ಹತ್ತಿಸಿ ಕುರ್ಚಿಯ ಮೇಲೆ ಮಲಗಿ ಮಳೆಯಲ್ಲಿ ನೆಂದಿದ್ದ ಬೀದಿಯ ದೀಪದ ಕಂಬವನ್ನು ನೋಡುತ್ತಿದ್ದರು. ಮಳೆ ಮೆಲ್ಲ ಮೆಲ್ಲನೆ ಜೋರಾಗತೊಡಗಿತು. ಅಂಗಳದಲ್ಲಿ ನೀರು ಇದ್ದಕ್ಕಿದ್ದಂತೆ ಹೆಚ್ಚತೊಡಗಿತು. ಆ ನೀರಿನಲ್ಲಿ ದೊಡ್ಡ ದೊಡ್ಡ ಗುಳ್ಳೆಗಳು ರೂಪಗೊಂಡು ಆ ನಿಮಿಷವೇ ಒಡೆಯುತ್ತಿತ್ತು.

ರವಿ ಮನೆಗೆ ಬಂದಾಗ ಮಳೆ ನಿಂತಿತ್ತು. ಅವನ ಬಟ್ಟೆಗಳೆಲ್ಲಾ ನೆಂದು ಮುದ್ದೆಯಾಗಿದ್ದವು. ತಲೆಗೂದಲಿನಿಂದ ನೀರು ತೊಟ್ಟಿಕ್ಕುತ್ತಿತ್ತು. ಆರಾಮ ಕುರ್ಚಿಯಲ್ಲಿ ಕುಳಿತಿದ್ದ ಅಪ್ಪನನ್ನೂ ಕೈಗಳಲ್ಲಿ ಮುಖವನ್ನಿಟ್ಟುಕೊಂಡೇ ನಿಂತಿದ್ದ ತಾಯಿಯನ್ನು ನೋಡದವನಂತೆ ತಲೆತಗ್ಗಿಸಿಕೊಂಡು ಒಳ ಹೋದನು.

ಆಕೆ ಆರಾಮ ಕುರ್ಚಿಯಲ್ಲಿ ಕುಳಿತಿದ್ದ ಅಪ್ಪಾವ್ರನ್ನು ನೋಡಿ ಕೇಳಿದರು, 'ಬಡಿಸಲೇ?'

'ಹುಂ' ಆಗಲೂ ಅಪ್ಪ ಚುಟ್ಟ ಸೇದುತ್ತಿದ್ದರು.

ಮಗ ರವಿಯು ಒದ್ದೆ ಬಟ್ಟೆಗಳನ್ನು ಬದಲಾಯಿಸಿ ಬಂದಾಗ ಅಮ್ಮ ಮೇಜಿನ ಮೇಲೆ ಊಟಕ್ಕೆ ಸಿದ್ಧ ಮಾಡುತ್ತಿದ್ದರು. ಅಮ್ಮ ತಟ್ಟೆಗೆ ಅನ್ನ ಹಾಕುತ್ತಿರುವಾಗಲೇ ಕೈ ಮುಂದಿನ ಕೊನೆಯಿಂದ ಕಣ್ಣುಗಳನ್ನು ಒರೆಸಿಕೊಳ್ಳುತ್ತಿದ್ದರು. ಮಗ ಅನ್ನದ ತಪ್ಪಲೆಯನ್ನು ನೋಡುತ್ತಾ ಕೇಳಿದ, 'ಅಮ್ಮಾ, ಯಾಕಮ್ಮಾ ಅಳುತ್ತಿದ್ದೀ?'

ಅಮ್ಮ ಏನೂ ಮಾತನಾಡದೆ ತಲೆಯ ಮೇಲೆ ಹಾಕಿಕೊಂಡಿದ್ದ ಮುಂಡಿನಿಂದ ಕಣ್ಣುಗಳನ್ನೂ